**ಎರಡನೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಸ್ಪೆಷಲ್ ಕೇಸ್ (ಎಸ್.ಸಿ/ಎಸ್.ಟಿ.) ನಂಃ 29/2017**
**ಪಿಡಬ್ಲೂಃ 1**
**ಸಿಡಬ್ಲೂಃ 2**

ಸಾಕ್ಷಿದಾರರ ಹೆಸರು : ರಾಜು ಕಂಬಾರ

ತಂದೆಯ ಹೆಸರು : ಬಸಪ್ಪ

ವಯಸ್ಸು : 22

ಉದ್ಯೋಗ : ಕೂಲಿ

ವಾಸಸ್ಥಳ : ಚಿಮ್ಮಲಗಿ ಭಾಗ-2

- - - - -

**ದಿಃ 29/11/2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

1) ಫಿರ್ಯಾದಿಯ ಹಾಗೂ ಆರೋಪಿಗಳ ಪರಿಚಯ ಇದೆ. ಚಾ.ಸಾ.15 ಅವರ ಪರಿಚಯ ಇದೆ.

2) ಸುಮಾರು ಎರಡು ವರ್ಷಗಳ ಹಿಂದೆ ಹೈಸ್ಕೂಲ ಕಡೆಗೆ ಹೊರಟಾಗ ರಸ್ತೆಯಲ್ಲಿ ಪೋಲೀಸರು ದಾಖಲೆಗೆ ಸಹಿ ಪಡೆದಿದ್ದಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯಾಗಿಲ್ಲ. ಸಾಕ್ಷಿ ಪಂಚನಾಮೆಯಲ್ಲಿ ತನ್ನ ಸಹಿ ಗುರ್ತಿಸಿದ್ದರಿಂದ ಪಂಚನಾಮೆಯನ್ನು ನಿ.ಪಿ.1, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರ್ತಿಸಲಾಯಿತು. ನನ್ನ ಸಮಕ್ಷಮ ಪೋಲೀಸರು ಏನನ್ನೂ ಜಪ್ತಿ ಮಾಡಿಕೊಂಡಿಲ್ಲ.

3) ರಸ್ತೆಯಲ್ಲಿ ನನ್ನನ್ನು ನಿಲ್ಲಿಸಿ ಪೋಲೀಸರು ಪೋಟೋ ತೆಗೆದಿದ್ದಾರೆ. ಸಾಕ್ಷಿ ಪೋಟೋದಲ್ಲಿ ತನ್ನನ್ನು ಗುರ್ತಿಸಿದ್ದರಿಂದ ಪೋಟೋವನ್ನು ನಿ.ಪಿ.2 ಎಂದು ಗುರ್ತಿಸಲಾಯಿತು.

4) ಅದೇ ರೀತಿ ಬಟ್ಟೆ ಜಪ್ತಿ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ಗುರ್ತಿಸಿದ್ದರಿಂದ ಪಂಚನಾಮೆಯನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರ್ತಿಸಲಾಯಿತು. ನನ್ನ ಸಮಕ್ಷಮ ಪೋಲೀಸರು ಏನನ್ನೂ ಜಪ್ತಿ ಮಾಡಿಕೊಂಡಿಲ್ಲ.

5) ನಿ.ಪಿ.1 ಮತ್ತು ನಿ.ಪಿ.3 ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಮಹಜರಗಳಿಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

6) ದಿನಾಂಕ 10-8-2016 ರಂದು ನನ್ನ ಮತ್ತು ಚಾ.ಸಾ.3 ರವರ ಸಮಕ್ಷಮ ಸಂಜೆ 5.15 ರಿಂದ 6.15 ರ ಸಮಯದಲ್ಲಿ ಪೋಲೀಸರು ಚಾ.ಸಾ.15 ಅಶೋಕ ತೋರಿಸಿದ ಜಗಳದ ಸ್ಥಳವನ್ನು ಪಂಚನಾಮೆ ಮಾಡಿ ಪಂಚನಾಮೆ ಸಮಯದಲ್ಲಿ ಸ್ಥಳದಿಂದ ಐದು ಬಿದಿರಿನ ಬಡಿಗೆ, ಒಂದು ಸಲಕಿ ಕಾವು, ಎರಡು ಕಬ್ಬಿಣದ ರಾಡು, ಒಂದು ಹಿಡಿಗೈ ಅಳತೆಯ ಕಲ್ಲುಗಳನ್ನು ನಿ.ಪಿ.1 ಪಂಚನಾಮೆಯಡಿ ಜಪ್ತಿ ಮಾಡಿ ವಶಪಡಿಸಿಕೊಂಡು, ನಿ.ಪಿ.2 ರಂತೆ ಫೋಟೋ ತೆಗೆಸಿ ಓದಿ ಹೇಳಿದ ನಂತರ ನನ್ನ ಸಹಿ ಪಡೆದಿದ್ದಾರೆಂದರೆ ಸರಿಯಲ್ಲ. ಐದು ಬಿದಿರಿನ ಬಡಿಗೆ, ಒಂದು ಸಲಕಿ ಕಾವು, ಎರಡು ಕಬ್ಬಿಣದ ರಾಡು, ಒಂದು ಹಿಡಿಗೈ ಅಳತೆಯ ಕಲ್ಲುಗಳನ್ನು ಕ್ರಮವಾಗಿ ಎಂ.ಓ.1 ರಿಂದ ಎಂ.ಓ.9 ಎಂದು ಗುರ್ತಿಸಲಾಯಿತು.

7) ಅದೇ ರೀತಿ ದಿನಾಂಕ 20-8-2016 ನನ್ನ ಮತ್ತು ಚಾ.ಸಾ.3 ರವರ ಸಮಕ್ಷಮ ಮದ್ಯಾಹ್ನ 1 ರಿಂದ 1.30 ರ ಸಮಯದಲ್ಲಿ ಸಾಕ್ಷಿದಾರ ಶಿವಪ್ಪ ಯಮನಪ್ಪ ಸಾತಿಹಾಳರವರು ತೋರಿಸಿ ಹಾಜರುಪಡಿಸಿದ ಪರಸಪ್ಪನ ಬಟ್ಟೆಗಳಾದ (1) ರಕ್ತ ಹತ್ತಿದ ಬಿಳಿ ಬಣ್ಣದ ಮುಂಡಿ ಬನಿಯಾನ (2) ರಕ್ತ ಹತ್ತಿದ ನೀಲಿ ಬಣ್ಣದ ಲುಂಗಿ, (3) ಹಣಮಂತ ಮೂರಮಟ್ಟಿ ಈತನ ಮೈಮೇಲಿದ್ದ ರಕ್ತ ಹತ್ತಿದ ಬಿಳಿ ದೋತ್ರ (4) ದುಂಡವ್ವ ಮೂರಮಟ್ಟಿಗೆ ಸಂಬಂಧಪಟ್ಟ ರಕ್ತ ಹತ್ತಿದ ಇಲಕಲ್ ಸೀರೆ, (5) ರಕ್ತ ಹತ್ತಿದ ಗುಲಾಬಿ ಬಣ್ಣದ ಸ್ವೇಟರ, (6) ನೀಲಮ್ಮ ಮೂರಮಟ್ಟಿಗೆ ಸಂಬಂಧಿಸಿದ ರಕ್ತ ಹತ್ತಿದ ಲಂಗ, (7) ಭೀಮರಾಯ ಮೂರಮಟ್ಟಿಗೆ ಸಂಬಂಧಪಟ್ಟ ರಕ್ತ ಹತ್ತಿದ ಹಸಿರು ಬಣ್ಣದ ನೈಟ ಪ್ಯಾಂಟ ಹಾಗೂ (8) ರಕ್ತ ಹತ್ತಿದ ಗುಲಾಬಿ ಬಣ್ಣದ ಟೀಶರ್ಟಗಳನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿದ ನಂತರ ಓದಿ ಹೇಳಿದ ನಂತರ ನಾನು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಸದರಿ ಬಟ್ಟೆಗಳನ್ನು ಕ್ರಮವಾಗಿ ಎಂ.ಓ.10 ರಿಂದ ಎಂ.ಓ.17 ಎಂದು ಗುರ್ತಿಸಲಾಯಿತು.

8) ನನ್ನ ಸಮಕ್ಷಮ ನಿ.ಪಿ.1 ಮತ್ತು ನಿ.ಪಿ.3 ರಂತೆ ಪಂಚನಾಮೆಗಳಾಗಿದ್ದರೂ ಸಹಿತ ಆರೋಪಿಗಳಿಗೆ ಸಹಾಯ ಮಾಡಲು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ. ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ</u>**

9) ಏನೂ ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಇಲ್ಲ ಎಂದು ಹೇಳಿದ್ದಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ. ಸರಿ ಅದೆ.

ಎರಡನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಎರಡನೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

ಸ್ಪೆಷಲ್ ಕೇಸ್ (ಎಸ್.ಸಿ/ಎಸ್.ಟಿ.) ನಂಃ 29/2017

ಪಿಡಬ್ಲ್ಯೂಃ 2

ಸಿಡಬ್ಲ್ಯೂಃ 3

ಸಾಕ್ಷಿದಾರರ ಹೆಸರು : ಬಾಬು ಚಲವಾದಿ

ತಂದೆಯ ಹೆಸರು : ಸಿದ್ದಪ್ಪ

ವಯಸ್ಸು : 40

ಉದ್ಯೋಗ : ಪಂಚಾಯಿತಿ ತಾತ್ಕಾಲಿಕ ನೌಕರ

ವಾಸಸ್ಥಳ : ಚಿಮ್ಮಲಗಿ ಭಾಗ-2

\- - - - -

**ದಿಃ 29/11/2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

1) ಫಿರ್ಯಾದಿಯ ಹಾಗೂ ಆರೋಪಿಗಳ ಪರಿಚಯ ಇದೆ. ಚಾ.ಸಾ.15 ಅವರ ಪರಿಚಯ ಇದೆ.

2) ಸುಮಾರು ಎರಡು ವರ್ಷಗಳ ಹಿಂದೆ ಹೈಸ್ಕೂಲ ಕಡೆಗೆ ಹೊರಟಾಗ ರಸ್ತೆಯಲ್ಲಿ ಪೋಲೀಸರು ದಾಖಲೆಗೆ ಸಹಿ ಪಡೆದಿದ್ದಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯಾಗಿಲ್ಲ. ಸಾಕ್ಷಿ ನಿ.ಪಿ.1 ಪಂಚನಾಮೆಯಲ್ಲಿ ತನ್ನ ಸಹಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರ್ತಿಸಲಾಯಿತು. ನನ್ನ ಸಮಕ್ಷಮ ಪೋಲೀಸರು ಏನನ್ನೂ ಜಪ್ತಿ ಮಾಡಿಕೊಂಡಿಲ್ಲ.

3) ರಸ್ತೆಯಲ್ಲಿ ನನ್ನನ್ನು ನಿಲ್ಲಿಸಿ ಪೋಲೀಸರು ಪೋಟೋ ತೆಗೆದಿದ್ದಾರೆ. ಸಾಕ್ಷಿ ನಿ.ಪಿ.2 ಪೋಟೋದಲ್ಲಿ ತನ್ನನ್ನು ಗುರ್ತಿಸಿದ್ದಾರೆ.

4) ಅದೇ ರೀತಿ ನಿ.ಪಿ.3 ಬಟ್ಟೆ ಜಪ್ತಿ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರ್ತಿಸಲಾಯಿತು. ನನ್ನ ಸಮಕ್ಷಮ ಪೋಲೀಸರು ಏನನ್ನೂ ಜಪ್ತಿ ಮಾಡಿಕೊಂಡಿಲ್ಲ.

5) ನಿ.ಪಿ.1 ಮತ್ತು ನಿ.ಪಿ.3 ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಮಹಜರಗಳಿಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು).

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

6) ದಿನಾಂಕ 10-8-2016 ರಂದು ನನ್ನ ಮತ್ತು ಚಾ.ಸಾ.2 ರವರ ಸಮಕ್ಷಮ ಸಂಜೆ 5.15 ರಿಂದ 6.15 ರ ಸಮಯದಲ್ಲಿ ಪೋಲೀಸರು ಚಾ.ಸಾ.15 ಅಶೋಕ ತೋರಿಸಿದ ಜಗಳದ ಸ್ಥಳವನ್ನು ನಿ.ಪಿ.1 ರಂತೆ ಪಂಚನಾಮೆ ಮಾಡಿ ಪಂಚನಾಮೆ ಸಮಯದಲ್ಲಿ ಸ್ಥಳದಿಂದ ನ್ಯಾಯಾಲಯದ ಮುಂದಿರುವ ಎಂ.ಓ.1 ರಿಂದ ಎಂ.ಓ.9 ಗಳನ್ನು ವಶಪಡಿಸಿಕೊಂಡು ಓದಿ ಹೇಳಿದ ನಂತರ ನನ್ನ ಸಹಿ ಪಡೆದಿದ್ದಾರೆಂದರೆ ಸರಿಯಲ್ಲ.

7) ಅದೇ ರೀತಿ ದಿನಾಂಕ 20-8-2016 ನನ್ನ ಮತ್ತು ಚಾ.ಸಾ.2 ರವರ ಸಮಕ್ಷಮ ಮದ್ಯಾಹ್ನ 1 ರಿಂದ 1.30 ರ ಸಮಯದಲ್ಲಿ ಸಾಕ್ಷಿದಾರ ಶಿವಪ್ಪ ಯಮನಪ್ಪ ಸಾತಿಹಾಳರವರು ತೋರಿಸಿ ಹಾಜರುಪಡಿಸಿದ ನ್ಯಾಯಾಲಯದ ಮುಂದಿರುವ ಎಂ.ಓ.10 ರಿಂದ ಎಂ.ಓ.17 ಬಟ್ಟೆಗಳನ್ನು ವಶಪಡಿಸಿಕೊಂಡು ನಿ.ಪಿ.3 ರಂತೆ ಪಂಚನಾಮೆ ಮಾಡಿದ ನಂತರ ಓದಿ ಹೇಳಿದ ನಂತರ ನಾನು ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

8) ನನ್ನ ಸಮಕ್ಷಮ ನಿ.ಪಿ.1 ಮತ್ತು ನಿ.ಪಿ.3 ರಂತೆ ಪಂಚನಾಮೆಗಳಾಗಿದ್ದರೂ ಸಹಿತ ಆರೋಪಿಗಳಿಗೆ ಸಹಾಯ ಮಾಡಲು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ. ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**

9) ಏನೂ ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಇಲ್ಲ ಎಂದು ಹೇಳಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ಎರಡನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.